# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ **21** ನೇ ಅಕ್ಟೋಬರ್ ಮಾಹೆ **2021** ನೇ ಇಸವಿ.

ಸಿ.ಸಿ. ನಂಃ **656/2021**

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ
ಕೋ-ಆಪರೇಟಿವ್ ಲಿಮಿಟೆಡ್, ಕಾರ್ಕಳ,
ಪ್ರತಿನಿಧಿಸುವವರುಃ ಸಹಾಯಕ ಬ್ರ್ಯಾಂಚ್ ಮ್ಯಾನೇಜರ್,
ಕಿಶೋರ್ ದೇವಾಡಿಗ, ಪ್ರಾಯ **25** ವರ್ಷಗಳು,
ತಂದೆಃ ಕೃಷ್ಣ ದೇವಾಡಿಗ,
ವಾಸಃ ಮಂಜುನಾಥ ಕೃಪ,
ಅಂಚಾರು ಮನೆ, ರೆಂಜಾಳ ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

**- ವಿರುದ್ಧ -**

ಲತೀಫ್, ಪ್ರಾಯ **39** ವರ್ಷಗಳು,
ತಂದೆಃ ಅಬ್ದುಲ,
ವಾಸಃ ಮನೆ ನಂ. **3-190,** ಮುದ್ದಣ್ಣ ನಗರ,
ಸಾಣೂರು ಗ್ರಾಮ, ಕಾರ್ಕಳ ತಾಲೂಕು,
ಉಡುಪಿ ಜಿಲ್ಲೆ. ... ಆರೋಪಿ

## ಆಪಾದನೆ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿಃ **30-03-2021** ರಂದು ರೂ. **4,67,657/-** ಗಳಿಗೆ ವಿಜಯ ಬ್ಯಾಂಕ್, ಶಿರ್ವಾ ಶಾಖೆ ಚೆಕ್ ಸಂಃ **178978** ನ್ನು ನೀಡಿದ್ದು, ಪಿರ್ಯಾದಿ ಸಂಸ್ಥೆಯವರು ಅದನ್ನು ನಗದೀಕರಿಸಲು ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಕಾರ್ಕಳ ಶಾಖೆಗೆ ಹಾಜರುಪಡಿಸಿದ್ದು, ಆದರೆ 'Funds Insufficient' ಎಂಬ ವಿಷಯವನ್ನು ಸದರಿ ಬ್ಯಾಂಕಿನವರು ದಿಃ **02-04-2021** ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಿ ಸಂಸ್ಥೆಯವರು ದಿಃ **24-04-2021** ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು **15**

ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ನಿಮಗೆ ಜಾರಿಯಾಗಿದ್ದು, ಸದರಿ ನೋಟಿಸನ್ನು ನೀವು ಸ್ವೀಕರಿಸಿದ್ದು, ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ  ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ.